# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: | 146 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 16.02.2022 |
| ಉತ್ತರಿಸುವ ಸಚಿವರು: | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಹೋಗುವ ರಸ್ತೆ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಸದರಿ ರಸ್ತೆಯ ಕೆಲವು ಭಾಗಗಳು ನಾದುರಸ್ತಿಯಾಗಿದ್ದು, ಗಮನಕ್ಕೆ ಬಂದಿದೆ. |
| ಆ) | ಸದರಿ ರಸ್ತೆ ಅಭಿವೃದ್ಧಿಪಡಿಸಲು ಯಾವ ಯೋಜನೆ ರೂಪಿಸಲಾಗಿದೆ. | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಹೋಗುವ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಈ ಕೆಳಕಂಡಂತೆ ಕೈಗೊಳ್ಳಲಾಗಿದೆ.<br><br>• ಕೊಳ್ಳೇಗಾಲ ಪಟ್ಟಣದಿಂದ ಹನೂರುವರೆಗೆ ಕೆಶಿಪ್ –3 ಯೋಜನೆಯಡಿಯಲ್ಲಿ ಎ.ಡಿ.ಬಿ ನೆರವಿನೊಂದಿಗೆ 23.8 ಕಿ.ಮೀ. ರಸ್ತೆಯನ್ನು 10 ಮೀಟರ್ ಅಗಲಕ್ಕೆ ಅಂತರಾಷ್ಟ್ರೀಯ ಮಾನದಂಡಗಳನ್ನು ಅಳವಡಿಸಿ ಐ.ಆರ್.ಸಿ ಮಾರ್ಗಸೂಚಿನ್ವಯ ರೂ.110.40 ಕೋಟಿ ಅಂದಾಜು ಮೊತ್ತದಲ್ಲಿ ಮಧುವನಹಳ್ಳಿ ಬೈಪಾಸ್ ಸೇರಿ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಈಗಾಗಲೇ 12.00 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ.<br><br>• ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಹನೂರಿನಿಂದ ಎಲ್ಲೇಮಾಳ ಮಾರ್ಗ ಕೌದಳ್ಳಿ ಸೇರುವ ರಸ್ತೆಯ ಒಟ್ಟು ಉದ್ದ 16.40 ಕಿ.ಮೀ ಇದ್ದು, ಈ ಕೆಳಕಂಡಂತೆ ಅಭಿವೃದ್ಧಿಗೆ ಕ್ರಮಕೈಗೊಳ್ಳಲಾಗಿದೆ.<br><br>ಅಂದಾಜು ಮೊತ್ತ : ರೂ. 1000.00 ಲಕ್ಷಗಳು<br>ಲೆಕ್ಕ ಶೀರ್ಷಿಕೆ : ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್.ಹೆಚ್.ಡಿ.ಪಿ)<br>ಅಭಿವೃದ್ಧಿಪಡಿಸುತ್ತಿರುವ ಉದ್ದ : 6.00 ಕಿ.ಮೀ. (ಸರಪಳಿ:0.30 ಕಿ.ಮೀ.ರಿಂದ 4.70 ಕಿ.ಮೀ.ವರೆಗೆ ಹಾಗೂ 15.10 ಕಿ.ಮೀ. ನಿಂದ 16.40 ಕಿ.ಮೀ.ವರೆಗೆ ಒಟ್ಟು 6.00 ಕಿ.ಮೀ. ಉದ್ದಕ್ಕೆ)<br>ಪ್ರಸ್ತುತ ಹಂತ : ಟೆಂಡರ್ ಪ್ರಕ್ರಿಯೆಯಲ್ಲಿದ್ದು, ನಿಗಧಿತ ಕಾಲಾವಧಿಯೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ.<br><br>• ಕೊಳ್ಳೇಗಾಲ ತಾಲ್ಲೂಕು ಶ್ರೀರಂಗಪಟ್ಟಣ–ಮಲೈ ಮಹದೇಶ್ವರ ಬೆಟ್ಟ ರಸ್ತೆ (ರಾಜ್ಯ ಹೆದ್ದಾರಿ–79) ಯ ಸರಪಳಿ 145.29 ಕಿ.ಮೀ ರಿಂದ |
| ಇ) | ಸದರಿ ಯೋಜನೆಯ ರೂಪರೇಷೆಗಳೇನು? | |
| ಈ) | ಯಾವ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. | |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | 146.14 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿದ್ದು, ವಿವರ ಈ ಕೆಳಕಂಡಂತಿದೆ:<br><br>ಅಂದಾಜು ಮೊತ್ತ : ರೂ. 450.00 ಲಕ್ಷಗಳು<br>ಲೆಕ್ಕ ಶೀರ್ಷಿಕೆ : 5054 ರಾಜ್ಯ ಹೆದ್ದಾರಿ ಸುಧಾರಣೆ<br>ಅಭಿವೃದ್ಧಿಪಡಿಸುತ್ತಿರುವ ಉದ್ದ : 0.685 ಕಿ.ಮೀ. (ಚತುಷ್ಪಥ ರಸ್ತೆ)<br>ಪ್ರಸ್ತುತ ಹಂತ : ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>• ಹನೂರು ತಾಲ್ಲೂಕು ಶ್ರೀರಂಗಪಟ್ಟಣ – ಮಲ್ಲೈ ಮಹದೇಶ್ವರ ಬೆಟ್ಟ ರಸ್ತೆ (ರಾಜ್ಯ ಹೆದ್ದಾರಿ-79) ಸರಪಳಿ 115.29 ರಿಂದ 145.39 ಕಿ.ಮೀ ವರೆಗೆ ಹಾಗೂ ಸರಪಳಿ 162.94 ರಿಂದ 163.59 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ ಮತ್ತು ಸರಪಳಿ 159.14 ರಿಂದ 161.12 ಕಿ.ಮೀ. ವರೆಗೆ ರಸ್ತೆ ಅಗಲೀಕರಣ ಕಾಮಗಾರಿ. (ಕೌದಳ್ಳಿ ಯಿಂದ ಮಲ್ಲೈ ಮಹದೇಶ್ವರ ಬೆಟ್ಟದ ವರೆಗೆ ಮತ್ತು ಮಲ್ಲೈ ಮಹದೇಶ್ವರ ಬೆಟ್ಟದಿಂದ ಪಾಲಾರ್ ವರೆಗೆ ಆಯ್ದಭಾಗಗಳಲ್ಲಿ) ಒಟ್ಟು 32.73 ಕಿ.ಮೀ ಉದ್ದ ರಸ್ತೆಯನ್ನು ರೂ.9500.00 ಲಕ್ಷಗಳಿಗೆ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುತ್ತಿದ್ದು, ಅನುದಾನದ ಲಭ್ಯತೆಯ ಮೇರೆಗೆ ಕೈಗೊಳ್ಳಲಾಗುವುದು.<br>• ಹಾಗೂ ಹನೂರು ತಾಲ್ಲೂಕು ಹನೂರು – ಪಾಲಾರ್ ರಸ್ತೆ ಸರಪಳಿ: 0.00 ಕಿ.ಮೀ ರಿಂಧ 16.40 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. (ಹನೂರಿನಿಂದ ಎಲ್ಲೇಮಾಳ ಮಾರ್ಗವಾಗಿ ಕೌದಳ್ಳಿ ಸೇರುವ ಜಿಲ್ಲಾ ಮುಖ್ಯ ರಸ್ತೆ) ಒಟ್ಟು 10.40 ಕಿ.ಮೀ ಉದ್ದ ರಸ್ತೆಯನ್ನು ರೂ.3500.00 ಲಕ್ಷಗಳಿಗೆ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುತ್ತಿದ್ದು, ಅನುದಾನದ ಲಭ್ಯತೆಯ ಮೇರೆಗೆ ಕೈಗೊಳ್ಳಲಾಗುವುದು. |

ಲೋಇ 04 ಸಿಕ್ಯೂಎನ್ 2022(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು